ಉಚಿತವಾದ ರೀತಿಯಲ್ಲಿ ಈ ವಿಚಾರಶಕ್ತಿಯನ್ನು ಬಳಸಿಕೊಳ್ಳಬಹುದು. ನಾವು ಭಯಪೀಡಿತರಾಗಿದ್ದಾಗ, ಅಥವಾ ಚಿಂತಾಕ್ರಾಂತರಾಗಿದ್ದಾಗ ಅದಕ್ಕೆ ಕಾರಣವನ್ನು ವಿಶ್ಲೇಷಿಸಿ ಅದನ್ನು ಕುರಿತು ವಿಚಾರ ಮಾಡುತ್ತ ಹೋಗಬೇಕು. ಈ ಎಲ್ಲ ನಿಷೇಧಾತ್ಮಕ ಭಾವಗಳಿಂದ ತನಗೇ ಹಾನಿ, ದೈಹಿಕ ಆರೋಗ್ಯ ಕೆಡುತ್ತದೆ, ಮನಸ್ಸಿನ ಶಾಂತಿ ಕದಡುತ್ತದೆ ಎಂದು ವಿಚಾರ ಮಾಡುವುದರಿಂದಲೂ ಭಾವತೀವ್ರತೆ ಎಷ್ಟೋ ಕಡಮೆಯಾಗುತ್ತದೆ. ಅವುಗಳು ಬೆಂಕಿ ಇದ್ದಂತೆ, ಅವು ಯಾರಲ್ಲಿ ಇರುತ್ತವೆಯೋ ಅವರನ್ನೇ ದಹಿಸುತ್ತದೆ. ವಿಚಾರವೆಂಬ ನೀರಿನ ಮೂಲಕ ಆ ಬೆಂಕಿಯನ್ನು ಆರಿಸಬೇಕು. **(ಮುಂದುವರಿಯುವುದು)**

(ಯುವಕರ ಪ್ರಶ್ನೆಗಳಿಗೆ ಮಾನ್ಯ ರಾಷ್ಟ್ರಪತಿಗಳು ನೀಡಿದ ಉತ್ತರಗಳು –ಭಾಗ 2)

# ? ಕೇಳಿ ತಿಳಿಯಿರಿ ☆

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

? ಹಿಂದುಳಿದ ವರ್ಗಗಳಿಗೆ ಸರ್ಕಾರಿ ಹಾಗೂ ಖಾಸಗಿ ವಿದ್ಯಾಸಂಸ್ಥೆಗಳಲ್ಲಿ ಮೀಸಲಾತಿಯ ವ್ಯವಸ್ಥೆಯಿದೆ. ಇದರಿಂದ ಪ್ರಯೋಜನವಿದೆಯೆ? ಇದರಿಂದ ಹಿಂದುಳಿದವರಿಗೆ ನಿಜವಾಗಿಯೂ ಉಪಕಾರವಾಗುತ್ತಿದೆಯೆ? ಇಷ್ಟೊಂದು ವರ್ಷಗಳ ಕಾಲ ಈ ಕೋಟಾ ವ್ಯವಸ್ಥೆಯಿದ್ದರೂ ಹಿಂದುಳಿದವರು ಏಕೆ ಮುಂದುವರಿಯುತ್ತಿಲ್ಲ?

☆ ವಿದ್ಯಾರ್ಥಿಗಳಿಗಾಗಿ ಎಲ್ಲ ಕಾಲೇಜುಗಳಲ್ಲಿಯೂ ಸೀಟನ್ನು ಹೆಚ್ಚಿಸುವುದು ಮತ್ತು ಉದ್ಯೋಗದ ಅವಕಾಶಗಳ ಹೆಚ್ಚಳವನ್ನು ಸಾಧಿಸುವುದು—ಇವೆರಡರ ಮೂಲಕ ಉನ್ನತ ಶಿಕ್ಷಣ ಹಾಗೂ ಉದ್ಯೋಗದಿಂದ ಯಾರೂ ವಂಚಿತರಾಗದಂತೆ ಮಾಡಬಹುದು.

? ಗಾಂಧೀಜಿಯವರ ಜಾಗತೀಕರಣ ಹಾಗೂ ಖಾಸಗೀಕರಣ ಸಿದ್ಧಾಂತಗಳನ್ನು ನಾವು ಮರೆಯುವ ಸಂಭವವಿದೆಯೇ?

☆ ಸಮಾಜದ ಯಾವುದೇ ವ್ಯಕ್ತಿಯೂ ಜಾಗತೀಕರಣ ಹಾಗೂ ಖಾಸಗೀಕರಣಗಳಿಂದಾಗಿ ಉದ್ಯೋಗದಿಂದ ವಂಚಿತನಾಗಬಾರದು ಎಂಬುದೇ ಗಾಂಧೀಜಿಯವರ ಮೂಲಸೂತ್ರ. ಈ ಅಂಶ ಇಂದಿಗೂ ಗ್ರಾಹ್ಯವಾಗಿದೆ. ತಂತ್ರಜ್ಞಾನದ ಆಕ್ರಮಣದಿಂದಾಗಿ ನಾವು ಯಾವುದೇ ವ್ಯಕ್ತಿಗೂ ಉದ್ಯೋಗದ ಅವಕಾಶವನ್ನು ತಪ್ಪಿಸಬಾರದು.

? ಆರ್ಥಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದಿರುವ ಮುಸ್ಲಿಂ ಜನಾಂಗದವರ ಬಗ್ಗೆ ನಿಮ್ಮ ಅಭಿಪ್ರಾಯವೇನು?

☆ ಬೇರೆ ಬೇರೆ ಧರ್ಮಗಳಿಗೆ ಸೇರಿದ ಹಾಗೂ ಬೇರೆ ಬೇರೆ ಪ್ರದೇಶಗಳಿಗೆ ಸೇರಿದ 260 ಶತಕೋಟಿ ಜನರು ದಾರಿದ್ರ್ಯ ರೇಖೆಯ ಕೆಳಗಿದ್ದಾರೆ. ಭಾರತವನ್ನು ಸಮೃದ್ಧವಾಗಿಸಬೇಕಾದರೆ ಅವರೆಲ್ಲರನ್ನೂ ಮೇಲೆತ್ತಬೇಕು.

? ಅಶ್ಲೀಲ ಚಿತ್ರಗಳ ಮೇಲೆ ನಿಷೇಧವನ್ನೇಕೆ ನೀವು ತರುತ್ತಿಲ್ಲ?

☆ ತಾಯಿತಂದೆಗಳಿಂದ ಹಾಗೂ ಶಾಲೆಯಿಂದ ಇದಕ್ಕೆ ತಡೆಬರಬೇಕು. ತಪ್ಪು ದಾರಿಯಲ್ಲಿ ಮಕ್ಕಳು ನಡೆಯದಂತೆ ತಾಯಿತಂದೆಯರು ಶಿಸ್ತನ್ನು ವಿಧಿಸಬೇಕು.

? ವಿಜ್ಞಾನ ಮತ್ತು ತಂತ್ರಜ್ಞಾನಗಳಲ್ಲಿ ಇಷ್ಟೊಂದು ಪ್ರಗತಿ ಸಾಧಿಸಿದ್ದರೂ, ಅರ್ಹತೆಯುಳ್ಳ ಅನೇಕರು ನಿರುದ್ಯೋಗಿಗಳಾಗಿದ್ದಾರೆ. ಇದಕ್ಕೆ ಯಾರು ಹೊಣೆ?

☆ ನಮ್ಮ ಶಿಕ್ಷಣ ಪದ್ಧತಿಯಲ್ಲಿ ವಿದ್ಯಾರ್ಥಿಗೆ ಉದ್ಯಮ ಸಾಹಸಿತನವನ್ನು ತಿಳಿಸಿಕೊಡಬೇಕು. 'ನಾವು ಮಾಡಬಲ್ಲೆವು' ಎಂಬ ಉತ್ಸಾಹವನ್ನು ಶಿಕ್ಷಣ ಪದ್ಧತಿಯು ಉಂಟುಮಾಡಬೇಕು. ಯುವಕರು ಕೇವಲ ಉದ್ಯೋಗವನ್ನು ಅರಸುವವರಾಗದೆ ಉದ್ಯೋಗವನ್ನು ಸೃಷ್ಟಿಸುವವರಾಗಬೇಕು.

? ಸರ್ಕಾರವು ಅನೇಕ ಯೋಜನೆಗಳ ಮೂಲಕ ಪ್ರಯತ್ನಿಸುತ್ತಿದ್ದರೂ ನಮ್ಮ ದೇಶದಲ್ಲಿ ವಿದ್ಯಾವಂತರ ಸಂಖ್ಯೆ ನಿರೀಕ್ಷಿಸಿದಷ್ಟು ಸಾಧಿತವಾಗಿಲ್ಲ ಏಕೆ? ಇಂತಹ ಯೋಜನೆಗಳನ್ನು ಕಾರ್ಯಗತಗೊಳಿಸುವಲ್ಲಿ ನಾವು ಎಲ್ಲೋ ತಪ್ಪುತ್ತಿದ್ದೇವೆ. ಎಲ್ಲಿ?

☆ ಹೌದು. ದೇಶದ ಪ್ರತಿಯೊಂದು ಮೂಲೆಗೂ ಅತ್ಯುತ್ತಮ ಶಿಕ್ಷಣ ತಲುಪಬೇಕು ಎಂಬುದೇ ನಮ್ಮ ಗುರಿ. ಟೆಲಿಶಿಕ್ಷಣ ವ್ಯವಸ್ಥೆಯ ವ್ಯಾಪಕ ಬಳಕೆಯಿಂದ ಹಾಗೂ ಎಜ್ಯುಸ್ಯಾಟ್ ಮೂಲಕ 100% ಸಾಕ್ಷರತೆಯನ್ನು ಸಾಧಿಸಬಹುದಾಗಿದೆ.

? ಶ್ರೀರಾಮಕೃಷ್ಣರು ಸಾಧನೆಯ ಮೂಲಕ ಎಲ್ಲ ಧರ್ಮಗಳೂ ಒಂದೇ ಸಾರ್ವತ್ರಿಕ ಸತ್ಯದತ್ತ ಕೊಂಡೊಯ್ಯುವ ಮಾರ್ಗಗಳೆಂದು ತೋರಿಸಿದ್ದಾರೆ. ಯಾವುದೇ ಮಾರ್ಗವನ್ನು ಅನುಸರಿಸಬಹುದೆಂದಿದ್ದಾರೆ. ಹಾಗಿದ್ದಲ್ಲಿ ವಿವಿಧ ಧರ್ಮಗಳ ನಡುವೆ ಇಷ್ಟೊಂದು ವೈಮನಸ್ಯ ಏಕಿದೆ?

☆ ಪ್ರತಿಯೊಂದು ಧರ್ಮಕ್ಕೂ ಎರಡು ಅಂಶಗಳಿವೆ—ಸಿದ್ಧಾಂತ ಮತ್ತು ಆಧ್ಯಾತ್ಮಿಕತೆ. ಆಧ್ಯಾತ್ಮಿಕತೆಯ ಅಂಶದಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಆದರೆ ಸೈದ್ಧಾಂತಿಕ ವಿಚಾರಗಳಲ್ಲಿ ನಾನಾ ರೀತಿಯ ಕಟ್ಟಳೆಗಳಿವೆ. ನಾವು ಈ ಕಟ್ಟಳೆಗಳನ್ನು ಮೀರಿ ಆಧ್ಯಾತ್ಮಿಕ ಮಟ್ಟಕ್ಕೆ ಏರಿದರೆ ಆಗ ಯಾವುದೇ ಸಮಸ್ಯೆ ಇರುವುದಿಲ್ಲ.

? ನಮ್ಮ ದೇಶದ ಪ್ರತಿಭಾನ್ವಿತರೆಲ್ಲ ಬೇರೆ ದೇಶಗಳಲ್ಲಿ ಕೆಲಸ ಮಾಡುವುದೇ ಉತ್ತಮ ಎಂದು ಭಾವಿಸುತ್ತಾರೆ. ತಮ್ಮ ದೇಶದ ಸೇವೆಯನ್ನು ಏಕೆ ಮಾಡುವುದಿಲ್ಲ?

☆ ನಮ್ಮ ದೇಶದಲ್ಲಿ ಸಂಶೋಧನೆಗಾಗಿಯೇ ಮೀಸಲಿರುವ ಹೆಸರಾಂತ ಸಂಸ್ಥೆಗಳಿವೆ. ಆದರೂ ಕೆಲವರು ವಿದೇಶಿ ವಿಶ್ವವಿದ್ಯಾನಿಲಯಗಳಿಗೆ ಪ್ರಾಶಸ್ತ್ಯ ನೀಡುತ್ತಾರೆ. ನಮ್ಮ ವಿಶ್ವವಿದ್ಯಾನಿಲಯಗಳ ಹಾಗೂ ಪ್ರಯೋಗಶಾಲೆಗಳ ಮೂಲಸೌಕರ್ಯಗಳನ್ನು ಉತ್ತಮಗೊಳಿಸುವತ್ತ ಸತತ ಪ್ರಯತ್ನ ಕಳೆದ ಹತ್ತು ವರ್ಷಗಳಿಂದ ಆಗುತ್ತಿದೆ. ಪ್ರತಿವರ್ಷವೂ